**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 06.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆ್‌ರ್ ಕೆ ಎಸ್ ವಕೀಲರಿಂದಃ**

ನಾನು ಬಿ ಕಾಂ ಪದವಿಧರನಿರುತ್ತೇನೆ. ನಾನು Kotak Life Insurance ನಲ್ಲಿ Priority Partner ಎಂಬುದಾಗಿ ಕೆಲಸ ಮಾಡುತ್ತೇನೆ. ನನಗೆ ಆಂಗ್ಲ ಭಾಷ್ಷೆ ಓದಲು ಬರುತ್ತದೆ. ಓದಿ ನೋಡಿ ನಂತರ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಅದರಲ್ಲಿರುವ ಮಾಹಿತಿಯನ್ನು ನಾನೇ ವಕೀಲರಿಗೆ ನೀಡಿರುತ್ತೇನೆ ಎಂದರೆ ಸರಿ. ಆರೋಪಿ ನನಗೆ ಪರಿಚಯ ಎಂಬುದಾಗಿ ನಾನು ಹೇಳಿದ್ದು ಅವರು ಎಷ್ಟು ವರ್ಷಗಳಿಂದ ಪರಿಚಯ ಎಂದರೆ 8 ವರ್ಷಗಳಿಂದ ಪರಿಚಯ ಎನ್ನುತ್ತಾರೆ. ನಿಮಗೆ ಹೇಗೆ ಪರಿಚಯ ಎಂದರೆ ಸಾಕ್ಷಿ ನಮ್ಮ ಮನೆಯ ಮೇಲ್ಭಾಗದಲ್ಲಿ ಆರೋಪಿಯ ಸಂಬಂಧಿಕರು ಬಾಡಿಗೆಗೆ ಇದ್ದರು ಅವರ ಮೂಲಕ ಆರೋಪಿ ಪರಿಚಯವಾಗಿರುತ್ತಾರೆ. ಆರೋಪಿಯ ಸಂಬಂಧಿಕರ ಹೆಸರು ಅಚ್ಚಮ್ಮ. ಸದರಿ ಅಚ್ಚಮ್ಮ ನಮ್ಮ ಮನೆಯಲ್ಲಿ ಬಾಡಿಗೆಗೆ ಇದ್ದರು ಎಂದು ತೋರಿಸಲು ದಾಖಲೆ ಹಾಜರಪಡಿಸಿದ್ದೀರಾ ಎಂದರೆ ಹಾಜರಪಡಿಸಿಲ್ಲ ಆದರೆ ಇದೆ ಎನ್ನುತ್ತಾರೆ. ಸದರಿ ಅಚ್ಚಮ್ಮ ಇವರು ಬಾಡಿಗೆಗೆ ಇದ್ದರು ಎಂಬ ವಿಚಾರವನ್ನು ನಾನು ದೂರಿನಲ್ಲಾಗಲೀ ಅಥವಾ ನನ್ನ ಸ್ವಇಚ್ಛಾ ಹೇಳಿಕೆಯಲ್ಲಾಗಲೀ ಬರೆಸಿಲ್ಲ ಎಂದರೆ ಸರಿ. ಆರೋಪಿ ತಮ್ಮ ಆರ್ಥಿಕ ಅಡಚಣೆಗೋಸ್ಕರ ನಮ್ಮನ್ನು ಹಣ ಕೇಳಿದರು ಎಂದು ಹೇಳಿದ್ದು ಯಾವ ದಿನ ಅವರು ಬಂದು ಕೇಳಿದರು ಎಂಬ ವಿಚಾರವನ್ನು ನಾನು ದೂರಿನಲ್ಲಿ ಬರೆಸಿಲ್ಲ ಎಂದರೆ ಸರಿ. ಆರೋಪಿತಳಿಗೆ ಯಾವ ತಾರೀಕಿನಂದು ಎಲ್ಲಿ 2 ಲಕ್ಷ ರೂ.ಗಳನ್ನು ಕೊಟ್ಟಿದ್ದೀರಿ ಎಂದರೆ ಸಾಕ್ಷಿ ನನ್ನ ಬಾಡಿಗೆ

ಮನೆಯಲ್ಲಿಯೇ ಕೊಟ್ಟಿರುತ್ತೇನೆ ಎನ್ನುತ್ತಾರೆ. ಈ ವಿಷಯವನ್ನು ನಾನು ದೂರಿನಲ್ಲಿ ಕಾಣಿಸಿಲ್ಲ ಎಂದರೆ ಸರಿ. ಆರೋಪಿಗೆ 2 ಲಕ್ಷ ರೂ.ಗಳ ನಗದು ಹಣ ಕೊಟ್ಟಿರುತ್ತೇನೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಬ್ಯಾಂಕ್ ಅಕೌಂಟ್ ನಂಬರ ಹಾಗೂ ಫೋನ್ ನಂಬರ ಇವುಗಳನ್ನು ನಾನು ನನ್ನ ದೂರಿನ ಲ್ಲಿ ಕಾಣಿಸಿಲ್ಲ ಎಂದರೆ ಸರಿ. ನನ್ನ ಫೋನ್ ನಂಬರ 9448035149 ಆಗಿರುತ್ತದೆ. ನನ್ನ ಐಸಿಐಸಿಐ ಬ್ಯಾಂಕಿನ ಅಕೌಂಟ್ ನಂಬರ 7651 ಕೊನೆಯ ಸಂಖ್ಯೆಗಳಾಗಿರುತ್ತವೆ. ನನ್ನ ಎಲ್ಲ ಬ್ಯಾಂಕಿನ ವ್ಯವಹಾರಗಳು ನನ್ನ ಇದೇ ಅಕೌಂಟ್ ನಿಂದ ನಡೆದಿರುತ್ತದೆ ಎಂದರೆ ಸರಿ. ಸದರಿ ಚೆಕ್‌ನ್ನು ಆರೋಪಿ ನನ್ನ ಸಮಕ್ಷಮ ಅವರೇ ಬರೆದುಕೊಟ್ಟಿದ್ದರು. ಅವರು ಬರೆದಿದ್ದನ್ನು ನಾನು ನೋಡಿರುತ್ತೇನೆ ಎಂದರೆ ಸರಿ. ಆರೋಪಿ ನನ್ನ ಸಮಕ್ಷಮ ಚೆಕ್ ಬರೆದುಕೊಟ್ಟಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ.1 ನ್ನು ತೋರಿಸಿ ಸತೀಶ ಕುರಡೇಕರ್ ಎಂಬುದು ಕಪ್ಪು ಇಂಕಿನಲ್ಲಿ ಇದ್ದು ಉಳಿದಂತೆ 2 lakh ಎಂಬುದೆಲ್ಲ ನೀಲಿ ಇಂಕಿನಲ್ಲಿ ಇರುತ್ತದೆ ಎಂದರೆ ಸರಿ. ನಿಪಿ.1 ರಲ್ಲಿರುವ ಬರವಣಿಗೆ ಆರೋಪಿಯ ಬರವಣಿಗೆ ಅಲ್ಲ ಎಂದರೆ ಸಾಕ್ಷಿ ಅವರದ್ದೆ ಎನ್ನುತ್ತಾರೆ. ಸದರಿ ದಾಖಲೆಯನ್ನು ಹೊಂದಾಣಿಕೆ ಮಾಡಲು ತಜ್ಞರ ಅಭಿಪ್ರಾಯ ಕೋರಿ ಕಳುಹಿಸಲು ನನ್ನದೇನು ತೊಂದರೆ ಇಲ್ಲ ಎಂದರೆ ಸಾಕ್ಷಿ ತೊಂದರೆ ಇಲ್ಲ ಎನ್ನುತ್ತಾರೆ. ದಿಃ27/01/2023 ರಂದು funds insufficient ಎಂದು ಬಂದ ನಂತರ ಆರೋಪಿಗೆ ನಾನು ತಿಳಿಸಿದೆ ಎಂದು ಹೇಳಿದ್ದು ಲಿಖಿತವಾಗಿ ಕೊಟ್ಟಿರಾ ಎಂದರೆ ಸಾಕ್ಷಿ ಇಲ್ಲ ಫೋನ್ ಮೂಲಕ ತಿಳಿಸಿದೆ ಎನ್ನುತ್ತಾರೆ. ದೀ 27/01/2023 ರಂದು ಚೆಕ್ ವಾಪಸಾದ ನಂತರ ಅವರಿಗೆ ಫೋನ್ ಮಾಡುತ್ತಲೇ ಬಂದಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ call details ನಿಮ್ಮ ಮೊಬೈಲ್‌ನಿಂದ ತೆಗೆದು ನ್ಯಾಯಾಲಯಕ್ಕೆ ಹಾಜರಪಡಿಸಲು ತೊಂದರೆ ಇಲ್ಲ

ಎಂದರೆ ಸಾಕ್ಷಿ ತೊಂದರೆ ಇಲ್ಲ ಎನ್ನುತ್ತಾರೆ. ಆರೋಪಿ ಸದರಿ ಹಣವನ್ನು arrange ಮಾಡಲು ಸಮಯಾವಕಾಶ ಕೋರಿದ್ದು 2 ನೇ ಬಾರಿ ಚೆಕ್ ಹಾಜರಪಡಿಸಲು ಹೇಳಿದರು ಎಂದು ಹೇಳಿದ್ದು ಅದನ್ನು ಲಿಖಿತವಾಗಿ ನಿಮಗೆ ಕೊಟ್ಟಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ನಾನು ಫೋನ್ ಮಾಡಿದರು ಅವರು ಕಾಲ್ ಅಟೆಂಡ್ ಮಾಡಿಲ್ಲ ಎನ್ನುತ್ತಾರೆ. ಅಂದರೆ ನಿಮಗೂ ಅವರಿಗೂ ಆಗ ಸಂಪರ್ಕ ಬಂದಿಲ್ಲ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. 2 ನೇ ಬಾರಿ ಚೆಕ್ ಹಾಜರಪಡಿಸಿದಾಗ insufficient funds ಎಂಬುದಾಗಿ ಬಂದಿಲ್ಲ ಎಂದರೆ ಸಾಕ್ಷಿ ಅದೇ ರೀತಿ ಬಂದಿದೆ ಎನ್ನುತ್ತಾರೆ. ಆದರೆ ನನ್ನ ಪಿರ್ಯಾದಿಯಲ್ಲಿ refer to drawer ಎಂಬುದಾಗಿ ಬಂದಿದೆ ಎಂದು ಬರೆಸಿರುತ್ತೇನೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಚೆಕ್ ಮಿಸ್ ಆಗಿದೆ ಎಂಬ ಕಾರಣಕ್ಕೆ ಪೇಮೆಂಟ್ ಸ್ಟಾಪ್ ಮಾಡಿ ಎಂದು ಆರೋಪಿ ಬ್ಯಾಂಕಿಗೆ ಒಂದು ಲೆಟರ್ ಕೊಟ್ಟಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ದಿಃ 06/04/2023 ರಂದು ಲಿಗಲ್ ನೋಟೀಸ್ ನೀಡಿರುತ್ತೇನೆ ಎಂದರೆ ಸರಿ. ಆರೋಪಿ ನಮಗೆ ಅವರ ಸಂಪೂರ್ಣ ವಿಳಾಸ ಕೊಟ್ಟಿದ್ದರು ಎಂದು ಹೇಳಿದ್ದು ಈ ಬಗ್ಗೆ ಏನಾದರೂ ದಾಖಲೆ ಕೊಟ್ಟಿದ್ದರಾ ಎಂದರೆ ಸಾಕ್ಷಿ ದಾಖಲೆ ಕೊಟ್ಟಿರಲಿಲ್ಲ ಅವರೇ ಹೇಳಿದ್ದರು ಎನ್ನುತ್ತಾರೆ. ಆರೋಪಿ ಅಂಚೆಯವರ ಜೊತೆ ಶರೀಕಾಗಿ ತಾನು ಆ ವಿಳಾಸದಲ್ಲಿ ಇಲ್ಲ ಎಂಬ ಹಿಂಬರಹದೊಂದಿಗೆ ನೋಟೀಸನ್ನು ದಿಃ 19/04/2023 ರಂದು ವಾಪಸ ಕಳುಹಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಿಕಾಂ ಪದವಿಧರನಾಗಿದ್ದು 20 ಸಾವಿರಕ್ಕಿಂತ ಹೆಚ್ಚಿಗೆ ಯಾವುದೇ ಹಣ ಕೊಡಬೇಕೆಂದರೆ ಬ್ಯಾಂಕಿನ ಮೂಲಕ ಅಥವಾ ಚೆಕ್‌ನ ಮೂಲಕ ಕೊಡಬೇಕಾಗುತ್ತದೆ ಎಂದರೆ ಸಾಕ್ಷಿ ಗೊತ್ತಿದೆ ಎನ್ನುತ್ತಾರೆ. ನಾನು income tax returns file ಮಾಡುತ್ತೇನೆ. ಅದಕ್ಕೆ ಸಂಬಂಧಿಸಿದ balance

sheet ನ್ನು ನ್ಯಾಯಾಲಯಕ್ಕೆ ಹಾಜರಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ income tax returns ನಲ್ಲಿ ಆರೋಪಿತಳಿಗೆ ಕೊಟ್ಟ 2 ಲಕ್ಷ ರೂ.ಗಳನ್ನು ಕಾಣಿಸಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. statement of account ನ್ನು ನಿಮ್ಮ ವೈಯ್ಯಕ್ತಿಕವಾಗಿ maintain ಮಾಡುತ್ತೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ದಿಃ 03/05/2021 ರಂದು ತಲಾ 20 ಸಾವಿರದಂತೆ 5 ಬಾರಿ ಹಣವನ್ನು ವರ್ಗಾವಣೆ ಮಾಡಿರುತ್ತೇನೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಮುಂದುವರೆದು ಮೊದಲು ನಮ್ಮ ಬಳಿ ಅವರು ವ್ಯವಹಾರ ಮಾಡುತ್ತಿದ್ದರು ಎನ್ನುತ್ತಾರೆ. Bank of Baroda ದ ಆರೋಪಿಯ ಹೆಸರಿನಲ್ಲಿರುವ ಪಾಸ್ ಬುಕ್‌ನ್ನು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ಪಾಸ್ ಬುಕ್ ನ್ನು ನಿಡಿ.1 ಎಂದು, ಹಾಗೂ ಸಂಬಂಧಪಟ್ಟ ನಮೂದನೆಯನ್ನು ನಿಡಿ.1(ಎ) ಎಂದು ಗುರುತಿಸಲಾಯಿತು. ನಿಡಿ.1 ರಲ್ಲಿ ಆರೋಪಿಯ ವಿಳಾಸ ಹೌಸ್ ನಂ.62, ಸಿದ್ದಗಂಗಾ ಕಾಲೋನಿ, ಕುಸುಗಲ್ ರಸ್ತೆ, ಕೇಶ್ವಪುರ, ಹುಬ್ಬಳ್ಳಿ ಎಂಬುದಾಗಿ ಇದೆ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ನಾನು ಲಿಗಲ್ ನೋಟೀಸನ್ನು ಆರೋಪಿಯ ತಪ್ಪು ವಿಳಾಸಕ್ಕೆ ಕಳುಹಿಸಿದ್ದೇನೆ ಎಂದರೆ ಸಾಕ್ಷಿ ಆ ಸಂದರ್ಭದಲ್ಲಿ ಅವರು ಅಲ್ಲಿಯೇ ವಾಸವಿದ್ದರು ಎನ್ನುತ್ತಾರೆ. ಆರೋಪಿ ಆ ಸಮಯದಲ್ಲಿ ಅದೇ ಮನೆಯಲ್ಲಿ ಇದ್ದರು ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ಸಾಕ್ಷಿ ದಾಖಲೆ ಇಲ್ಲ ಎನ್ನುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ಆರೋಪಿ ತಮಗೆ ಫೋನ್ ಪೇ ಮೂಲಕ ನಿಮ್ಮ ಖಾತೆಗೆ ಹಣ ಕಳುಹಿಸಿದ್ದು ಈ ದಾಖಲೆಗಳೆಂದು ಐದು ಪುಟದ ಮೊಬೈಲ್ ನ ಪ್ರಿಂಟ್ ತೆಗೆದಿದ್ದನ್ನು ತೋರಿಸಲಾಗಿ ಸಾಕ್ಷಿ ಅವುಗಳೆಲ್ಲ ಬಹಳ ಹಿಂದಿನವುಗಳು ಎಂದು ನುಡಿದು ಹಿಂದಿನದ್ದಕ್ಕೆ ಸಂಬಂಧಿಸಿದಂತೆ ಆ ಹಣ ಇರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಐದು ಪುಟದ ಮೊಬೈಲ್ ಪ್ರಿಂಟ್ ನ್ನು ನಿಡಿ.2 ಎಂದು ಗುರುತಿಸಲಾಯಿತು.

ಸದರಿಯವುಗಳು ಹಿಂದಿನ ವ್ಯವಹಾರದ ದಾಖಲೆಗಳೆಂದು ತೋರಿಸಲು ನೀವು ಅವುಗಳನ್ನೇನಾದರೂ ದೂರಿನಲ್ಲಿ ನಿಮ್ಮ ಸ್ವಇಚ್ಛಾ ಹೇಳಿಕೆಯಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನನ್ನ ಖಾತೆಗೆ ದಿಃ06/06/2022 ರಂದು 5000/- ರೂ.ಗಳು ಮತ್ತು ದಿಃ 14/06/2022 ರಂದು 3000/- ರೂ.ಗಳು ಆರೋಪಿಯ ಖಾತೆಯಿಂದ ನನ್ನ ಖಾತೆಗೆ ಜಮಾ ಆಗಿದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸಾಕ್ಷಿ ಈ ಎಲ್ಲ ವ್ಯವಹಾರಗಳು ಹಿಂದಿನ ವ್ಯವಹಾರಗಳಿಗೆ ಸಂಬಂಧಿಸಿದ್ದು ಆಗಿದೆ ಎನ್ನುತ್ತಾರೆ. ಆರೋಪಿಯ ಜೊತೆ ಹಳೇಯ ವ್ಯವಹಾರಗಳು ಇದ್ದವು ಎಂದು ದೂರಿನಲ್ಲಿ ಮತ್ತು ನೋಟೀಸಿನಲ್ಲಿ ಕಾಣಿಸಿಲ್ಲ ಎಂದರೆ ಸಾಕ್ಷಿ ಅವುಗಳನ್ನು ಕಾಣಿಸಬೇಕೆಂದು ನನಗೆ ಅನಿಸಲಿಲ್ಲ ಎನ್ನುತ್ತಾರೆ.

**(ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು).**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**